**<u>ಅಸಲು ದಾವಾ. ನಂಃ 11/2023</u>**

**ಡಿ.ಡಬ್ಲ್ಯು - 1 ಮರಿಯಪ್ಪ ಮಾದರ**

**<u>ಸಾಕ್ಷಿಯನ್ನು ದಿನಾಂಕಃ 03.02.2026 ರಂದು ಪುನಃ ಸಾಕ್ಷಿ ಕರೆಯಿಸಿ, ಪ್ರಮಾಣೀಕರಿಸಲಾಯಿತು.</u>**
**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಎಸ್.ವಿ.ಸಿ. ವಕೀಲರಿಂದಃ</u>**

2. ನಾನು ಈಗ ಶಾಂತಗೇರಿ ಗ್ರಾಮಪಂಚಾಯತಿಯಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದೇನೆ. ದಾವಾ ಆಸ್ತಿ ಹಾಗೂ ನಮ್ಮ ಆಸ್ತಿ ಶಾಂತಗೇರಿ ಪಂಚಾಯತಿ ವ್ಯಾಪ್ತಿಗೆ ಬರುತ್ತವೆ. ಕೈಪಿಯತ್ ಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಗೊತ್ತಿದೆ. ನನ್ನ ಕೈಪಿಯತ್ ನ ಪ್ಯಾರಾ ನಂಬರ 10 ರಲ್ಲಿ ನಮ್ಮ ಆಸ್ತಿಯ ವಿಸ್ತೀರ್ಣ ಉತ್ತರ-ದಕ್ಷಿಣ 20 ಅಡಿ, ಪೂರ್ವ-ಪಶ್ಚಿಮವಾಗಿ 18 ಅಡಿ ಎಂದು ತೋರಿಸಿರುತ್ತೇನೆ ಎಂದರೆ ಸರಿ.

3. ನಾನು ಹಾಜರು ಪಡಿಸಿರುವ ದಾಖಲೆಗಳನ್ನು ವಕೀಲರಿಗೆ ಕೊಟ್ಟಿರುತ್ತೇನೆ ಅವರು ಹಾಜರು ಪಡಿಸಿರುತ್ತಾರೆ. ನಾನು ಹಾಜರು ಪಡಿಸಿರುವ ಎಲ್ಲಾ ದಾಖಲೆಗಳ ಬಗ್ಗೆ ಮತ್ತು ಅವುಗಳನ್ನು ಬರೆದಿರುವ ಸಂಗತಿಗಳ ಬಗ್ಗೆ ಮಾಹಿತಿ ಇರುತ್ತದೆಯಾ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ. ಆಸ್ತಿಗೆ ಸಂಬಂಧಿಸಿದಂತೆ ನಿಡಿ -6 ನ್ನು ಹಾಜರು ಪಡಿಸಿರುತ್ತೇನೆ. ನಾನು ಹಾಜರು ಪಡಿಸಿರುವ ನಿಡಿ -6 ರಲ್ಲಿ ಆಸ್ತಿಯ ವಿಸ್ತೀರ್ಣ 20 X 22 ಅಂತಾ ಇದೆ ಎಂದರೆ ಸರಿ. ನಾನು ನನ್ನ ತಕರಾರಿನಲ್ಲಿ ನಮ್ಮ ಆಸ್ತಿಯ ವಿಸ್ತೀರ್ಣ 20 X 18 ಎಂದು ವಹಿವಾಟಿನ ಆಧಾರದ ಮೇಲೆ ಹೇಳುತ್ತೇನೆ. ಸದರಿ ಆಸ್ತಿಯು ಅಷ್ಟೇವಿಸ್ತೀರ್ಣ ಇರುತ್ತದೆ ಅದರಲ್ಲಿ ವಹಿವಾಟು ಮಾಡುತ್ತಿದ್ದೇವೆ ಎಂದು ಅಳತೆ ಮಾಡಿಸಿ ದಾಖಲೆಯನ್ನು ಹಾಜರು ಪಡಿಸಿಲ್ಲ. ನಾನು ಶಾಂತಗೇರಿ ಪಂಚಾಯತಿಯಲ್ಲಿ ಗುಮಾಸ್ತನಾಗಿದ್ದರಿಂದ ನನಗೆ ಅನೂಕೂಲವಾಗುವಂತೆ ದಾಖಲೆಗಳನ್ನು ಹಾಜರು ಪಡಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನಮ್ಮ ಆಸ್ತಿಯ ವಿಸ್ತೀರ್ಣ ಎಷ್ಟು ಇರುತ್ತದೆ ಎಂದು ಗೊತ್ತಿಲ್ಲ ಎಂದರೆ ಸಾಕ್ಷಿಯು ಅಳತೆ ಮಾಡಿಲ್ಲ ಎಂದು ನುಡಿಯುತ್ತಾರೆ.



4. ಶೌಚಾಲಯ ಮತ್ತು ಸೆಪ್ಟಿ ಟ್ಯಾಂಕ್ ಕಟ್ಟಿಸುವಾಗ ಪಂಚಾಯತಿಗೆ ಅರ್ಜಿ ಕೊಟ್ಟಿರುತ್ತೇನೆ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನಾನು ಶೌಚಾಲಯ ನಿರ್ಮಾಣ ಮಾಡುವಾಗ ಪಂಚಾಯತಿಗೆ ಅರ್ಜಿ ಕೊಟ್ಟಿಲ್ಲ, ಆದರೂ ಕೂಡ

ಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶೌಚಾಲಯವನ್ನು 2023 ರಲ್ಲಿ ಕಟ್ಟಿಸಿರುತ್ತೇನೆ. ಯಾವ ತಿಂಗಳಿನಲ್ಲಿ ಕಟ್ಟಿಸಿರುತ್ತೇನೆ ಎಂದು ನೆನಪಿಲ್ಲ.

5. ವಾದಿಗಳು ನಾನು ಶೌಚಾಲಯ ಕಟ್ಟಿಸುವಾಗ ನಮ್ಮ ಜಾಗದಲ್ಲಿ ಕಟ್ಟಿಸುತ್ತಿದ್ದಾರೆ ಎಂದು ತಕರಾರು ಕೊಟ್ಟಿದ್ದರು ಎಂದರೆ ಸರಿ. ಆ ಜಾಗದಲ್ಲಿ ಶೌಚಾಲಯ ನಿರ್ಮಾಣ ಮಾಡಬಾರದೆಂದು ವಾದಿಗಳು ದಾವೆ ಸಲ್ಲಿಸಿ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಪಂಚಾಯತಿಯವರು ನಿಡಿ -12 ರಂತೆ ಯತಾಸ್ವಿತಿ ಕಾಪಾಡಿಕೊಂಡು ಹೋಗಬೇಕೆಂದು ಆದೇಶ ಮಾಡಿದ್ದರು ಎಂದರೆ ಸಾಕ್ಷಿಯು ಶೌಚಾಲಯ ನಿರ್ಮಾಣ ಮಾಡಿದ ನಂತರ ಆದೇಶ ಮಾಡಿದ್ದರು ಎಂದು ನುಡಿಯುತ್ತಾರೆ. ನಿಡಿ -12 ರಲ್ಲಿ ಶೌಚಾಲಯ ಕಟ್ಟಲಾಗಿದೆ ಎಂದು ಬರೆದಿಲ್ಲ, ನಿರ್ಮಾಣ ಮಾಡುತ್ತೀರುವ ಶೌಚಾಲಯವನ್ನು ನಿಲ್ಲಿಸಿ ಯತಾಸ್ವಿತಿ ಕಾಪಾಡಿಕೊಂಡು ಹೋಗಬೇಕೆಂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

6. ಯತಾಸ್ವಿತಿ ಕಾಪಾಡಿಕೊಂಡು ಹೋಗಬೇಕೆಂದು ನ್ಯಾಯಾಲಯದಿಂದ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶ ಇದ್ದರೂ ಸಹ ಅಕ್ರಮವಾಗಿ ವಾದಿಯರ ಆಸ್ತಿಯಲ್ಲಿ ಶೌಚಾಲಯ ನಿರ್ಮಾಣ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ನಿಡಿ -6 ದಾಖಲೆಯಲ್ಲಿ ವಾದಿಯರ ಪ್ಲಾಟನ ವಿಸ್ತೀರ್ಣ 34 X 25 ಅಡಿ ಇರುತ್ತದೆ ಎಂದರೆ ಸಾಕ್ಷಿಯು ಸುಳ್ಳು ಹೇಳಿ ಬರೆಸಿದ್ದಾರೆ ಎಂದು ನುಡಿಯುತ್ತಾರೆ. ಸುಳ್ಳು ಹೇಳಿ ಬರೆಸಿದ್ದಾರೆ ಎಂದು ನನಗೆ 2023 ರಲ್ಲಿ ಗೊತ್ತಾಗಿದೆ. ಆ ರೀತಿ ಸುಳ್ಳು ಹೇಳಿ ಬರೆಸಿರುತ್ತಾರೆ ಎಂದು ನಾನು ಪಂಚಾಯತಿಯ ವಿರುದ್ದ ಅವರ ಮೇಲಾಧಿಕಾರಿಯವರಲ್ಲಿ



ಮೇಲ್ಮನವಿ ಸಲ್ಲಿಸಿಲ್ಲ. ಕೊನೆಯ ಪಕ್ಷ ಈ ರೀತಿ ಸುಳ್ಳು ಹೇಳಿ ವಿಸ್ತೀರ್ಣವನ್ನು ಬರೆಸಿರುತ್ತಾರೆ ಎಂದು ಮೇಲಾಧಿಕಾರಿಗಳಿಗೆ ಅರ್ಜಿಯನ್ನು ಸಹ ಸಲ್ಲಿಸಿಲ್ಲ.

7. ನಾನು ನನ್ನ ಕೈಪಿಯತ್ ನಲ್ಲಿ ನಿರ್ಧಿಷ್ಟವಾಗಿ ವಾದಿಯರ ಆಸ್ತಿಯ ವಿಸ್ತೀರ್ಣ 25 X 36 ಅಡಿಯಿಲ್ಲ ಎಂದು ಕಾಣಿಸಿಲ್ಲ ಎಂದರೆ ನೆನಪಿಲ್ಲ. ಸಾಕ್ಷಿಗೆ ತಾವು ಸಲ್ಲಿಸಿರುವ ಕೈಪಿಯತ್ ನ್ನು ತೋರಿಸಲಾಗಿ ಸದರಿ ನನ್ನ ಕೈಪಿಯತ್ ನಲ್ಲಿ ಆ ರೀತಿಯಾಗಿ ತೋರಿಸಿಲ್ಲ

ಎಂದು ನುಡಿಯುತ್ತಾರೆ. ನನ್ನ ಲಿಖಿತ ತಕರಾರಿನಲ್ಲಿ ಒಂದು ಇರುತ್ತದೆ ಮತ್ತು ದಾಖಲೆಯಲ್ಲಿ ಒಂದು ಇರುತ್ತದೆ ನಾನು ವಾದಿಯರ ಆಸ್ತಿಯಲ್ಲಿ ಶೌಚಾಲಯವನ್ನು ನಿರ್ಮಾಣ ಮಾಡಿ ವಾದಿಯರೇ ವಿಸ್ತೀರ್ಣವನ್ನು ಸುಳ್ಳು ಹೇಳಿ ಬರೆಸಿದ್ದಾರೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಗಳು ಸೃಷ್ಟಿಸಿ ಹಾಜರು ಪಡಿಸಿರುವ ದಾಖಲಾತಿಗಳು ಎಂದರೆ ಸರಿಯಲ್ಲ.

8. ನಿಡಿ -8 ರಲ್ಲಿ ಕಾಣಿಸಿರುವ ಚಕ್ಕುಬಂದಿ ಸರಿ ಇರುತ್ತದೆ. ಅದರಲ್ಲಿ ಪೂರ್ವ-ಪಶ್ಚಿಮ 20 ಅಡಿ ಮತ್ತು ಉತ್ತರ-ದಕ್ಷಿಣ 18 ಅಡಿ ಇರುತ್ತದೆ ಎಂದರೆ ಸರಿ. ನಾನು ಶೌಚಾಲಯವನ್ನು 20 X 18 ಒಳಗಡೆಯೇ ನಿರ್ಮಾಣ ಮಾಡಿರುತ್ತೇನೆ. ಸದರಿ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯರ ಆಸ್ತಿಯನ್ನು ಒತ್ತುವರಿ ಮಾಡಿ, ಶೌಚಾಲಯವನ್ನು ನಿರ್ಮಾಣ ಮಾಡಿಕೊಂಡಿದ್ದರು ಸಹ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ನಾನು ನ್ಯಾಯಾಲಯಕ್ಕೆ ಅಳತೆ ಮಾಡಿದ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

<u>**ಅಸಲು ದಾವಾ. ನಂಃ 11/2023**</u>

**ಡಿ.ಡಬ್ಲು - 1 ಮರಿಯಪ್ಪ ಮಾದರ**

9. ಶಾಂತಗೇರಿ ಪಂಚಾಯತಿಯವರು ಶೌಚಾಲಯ ನಿರ್ಮಾಣ ಮಾಡಲು ಲೈಸನ್ಸ ನೀಡಿದ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ನಾನು ಪಂಚಾಯತಿಯವರಿಂದ ಯಾವುದೇ ಲೈಸನ್ಸ ಪಡೆದುಕೊಳ್ಳದೇ ಇದ್ದುದ್ದರಿಂದ, ಒಂದು ವೇಳೆ ಲೈಸನ್ಸ ಕೊಟ್ಟಿದ್ದರೆ ಅಳತೆ ಮಾಡಿ ಕೊಡುತ್ತಾರೆ ಎಂದು ಆ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

10. ನಾನು ಪೂರ್ವ-ಪಶ್ಚಿಮ 18 ಅಡಿ ಮತ್ತು ಉತ್ತರ-ದಕ್ಷಿಣ 20 ಅಡಿ ಆಸ್ತಿಯನ್ನು ಒತ್ತುವರಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಅದರಲ್ಲಿ ಶೌಚಾಲಯವನ್ನು ನಿರ್ಮಾಣ ಮಾಡಿಕೊಂಡು ಉಳಿದ ಆಸ್ತಿಯನ್ನು ತಿಪ್ಪೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಅದೆ.

-ಸಹಿ-

ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.